# ದುಡ್ಡು ದೊಡ್ಡದಪ್ಪ..!

## ಪ್ರಶ್ನೋತ್ತರ

ಸಿ ಎಸ್ ಸುಧೀರ್, ಸಿಇಒ- ಸಂಸ್ಥಾಪಕರು
ಇಂಡಿಯನ್ ಮನಿ.ಕಾಂ



ಬ್ಯಾಂಕಿಂಗ್, ಹೂಡಿಕೆ, ಉಳಿತಾಯ, ಗಳಿಕೆ, ಸಾಲ, ವಿಮೆ ಹೀಗೆ ಆರ್ಥಿಕ ವಿಷಯಗಳಿಗೆ ಸಂಬಂಧಪಟ್ಟ ಪ್ರಶ್ನೆಗಳನ್ನು ನೀವೂ ಕಳುಹಿಸಬಹುದು.

ಪ್ರಶ್ನೆ ಕಳುಹಿಸಬೇಕಾದ ಇ– ಮೇಲ್ ವಿಳಾಸ sudheer@indianMoney.com

## ಜೀವನದ ಭದ್ರತೆಗೆ ಯಾವ ಪಾಲಿಸಿ ಅಗತ್ಯ?

**1.) ನಾನು 35 ವರ್ಷದ ಕಿರಣ್‌ರಾವ್. ರಾಯಚೂರಿನ ಖಾಸಗಿ ಕಂಪನಿಯಲ್ಲಿ ಪ್ರಾಜೆಕ್ಟ್ ಎಂಜಿನಿಯರ್. ಮಾಸಿಕ 70 ಸಾವಿರ ವೇತನ ಪಡೆಯುತ್ತಿದ್ದೇನೆ. ಭವಿಷ್ಯದ ಭದ್ರತೆಗಾಗಿ ಎಂಡೋಮೆಂಟ್ ಪಾಲಿಸಿ ಅಥವಾ ಟರ್ಮ್ ಇನ್ಶೂರೆನ್ಸ್ ಮಾಡಿಸುವಂತೆ ನಮ್ಮ ಮನೆಯವರು ಸಲಹೆ ಮಾಡುತ್ತಿದ್ದಾರೆ. ನಾನು ಗೊಂದಲಕ್ಕೆ ಸಿಲುಕಿದ್ದು, ಯಾವ ವಿಮೆ ಮಾಡಿಸಿದರೆ ಒಳಿತು ಸಲಹೆ ನೀಡಿ.**

ನೀವು ಭವಿಷ್ಯದ ಭದ್ರತೆ ಬಗ್ಗೆ ಯೋಚಿಸುವಂತೆ ಮಾಡಿದ ನಿಮ್ಮ ಮನೆಯವರಿಗೆ ಮೊದಲಿಗೆ ಧನ್ಯವಾದತಿಳಿಸಿ. ನಮ್ಮ ದೇಶದಲ್ಲಿ ಬಹುತೇಕರಿಗೆ ಎಂಡೋಮೆಂಟ್ ಪಾಲಿಸಿಗಳ ಬಗ್ಗೆ ಗೊತ್ತಿದೆ. ಆದ್ರೆ ಟರ್ಮ್ ಲೈಫ್ ಇನ್ಶೂರೆನ್ಸ್ ಬಗ್ಗೆ ಅರಿವೇ ಇಲ್ಲ. ಟರ್ಮ್ ಲೈಫ್ ಇನ್ಶೂರೆನ್ಸ್ ಇವತ್ತಿನ ಪ್ರತಿಯೊಂದು ಕುಟುಂಬದ ಅಗತ್ಯ. ಪಾಲಿಸಿದಾರರು ಆಕಸ್ಮಿಕ ಸಾವಿನ ವಿರುದ್ಧ ಪಡೆಯುವ ವಿಮೆ ರಕ್ಷಣೆ ಸೌಲಭ್ಯವನ್ನು 'ಟರ್ಮ್ ಲೈಫ್ ಇನ್ಶೂರೆನ್ಸ್' ಒಳಗೊಂಡಿರುತ್ತದೆ. ನೀವು ನಂಬಿದವರನ್ನ ನಿಮ್ಮ ಅನುಪಸ್ಥಿತಿಯಲ್ಲೂ ಹಣಕಾಸಿನ ಸಂಕಷ್ಟದಿಂದ ಪಾರು ಮಾಡುವ ವಿಶಿಷ್ಟ ಪಾಲಿಸಿಯೇ ಟರ್ಮ್ ಇನ್ಶೂರನ್ಸ್. ಇದರಂತೆ ಪಾಲಿಸಿಅವಧಿಯಲ್ಲಿ ಒಂದು ವೇಳೆ ಪಾಲಿಸಿದಾರನು ಮೃತಪಟ್ಟರೆ, ಗರಿಷ್ಠ ಮೊತ್ತದ ವಿಮಾ ಸುರಕ್ಷತೆಯನ್ನು ಇದು ಖಾತರಿಪಡಿಸುತ್ತದೆ. ಟರ್ಮ್ ಇನ್ಶೂರನ್ಸ್ ಅತ್ಯಂತ ಅಗ್ಗ ಮತ್ತು ಉತ್ತಮವಾದ ಜೀವ ವಿಮೆ. ಆದರೂ ವಿಮಾ ಕಂಪನಿಗಳು ಟರ್ಮ್ ಇನ್ಶೂರನ್ಸ್ ಮಾರಾಟಕ್ಕೆ ಒತ್ತು ನೀಡುವುದೇ ಇಲ್ಲ. ಕಂಪನಿಗಳು ಎಂಡೋಮೆಂಟ್ ಅಥವಾ ಯುಲಿಪ್ ರೀತಿಯ ಪಾಲಿಸಿಗಳನ್ನು ಮಾತ್ರ ಮಾರುಕಟ್ಟೆಯಲ್ಲಿ ಪ್ರೋತ್ಸಾಹಿಸುತ್ತವೆ. ಬಹಳಷ್ಟು ಜನರು ಟರ್ಮ್ ಇನ್ಶೂರನ್ಸ್ ವಿಮೆಯ ಬಗ್ಗೆ ಮಾತನಾಡುವಾಗ ಅದು ನಷ್ಟದ ಹೂಡಿಕೆ ಎನ್ನುವ ಅಭಿಪ್ರಾಯ ಹೊಂದಿರುತ್ತಾರೆ. ಇದಕ್ಕೆ ಅವರು ಕೊಡುವ ಮುಖ್ಯ ಕಾರಣ, ಈ ವಿಮೆಯಲ್ಲಿ ಕಟ್ಟಿದ ಹಣ ವಾಪಸ್ ಬರುವುದಿಲ್ಲ ಎನ್ನುವುದು, ಬಹುತೇಕರು ಹಣ ವಾಪಸ್ಸು ನೀಡುವ(ಮನಿ ಬ್ಯಾಕ್) ಪಾಲಿಸಿಗಳೇ ಲಾಭದಾಯಕ ಎನ್ನುವ ವಾದವನ್ನು ಒಪ್ಪಿಕೊಂಡುಬಿಟ್ಟಿದ್ದಾರೆ. ಅಸಲಿ ವಿಚಾರವೇನೆಂದರೆ ವಿಮೆಗಾಗಿ ಕಟ್ಟಿದ ದುಡ್ಡು ಯಾವ ಪಾಲಿಸಿಯಲ್ಲಿಯೂ ವಾಪಸು ಸಿಗುವುದಿಲ್ಲ. ಟರ್ಮ್ ಪಾಲಿಸಿಯಲ್ಲಿ ವಿಮೆಯ ಪ್ರೀಮಿಯಂ ಅನ್ನು ಮಾತ್ರ ನಾವು ಕಟ್ಟುತ್ತೇವೆ. ಹೂಡಿಕೆ ಸಹಿತದ ಇತರ ಪಾಲಿಸಿಗಳಲ್ಲಿ ವಿಮೆಯ ಪ್ರೀಮಿಯಂ ಜತೆಗೆ ಹೂಡಿಕೆಯ ಮೊತ್ತವನ್ನೂ ಪಾವತಿಸುತ್ತೇವೆ. ಎರಡೂ ಸಂದರ್ಭಗಳಲ್ಲೂ ವಿಮಾ ಪ್ರೀಮಿಯಂ ಹಣ ವಾಪಸು ಬರುವುದಿಲ್ಲ. ವಾಪಸು ಬರುವುದು ಹೂಡಿಕೆಯ ಮೊತ್ತವಷ್ಟೇ. ಈ ಸಣ್ಣ ಮಟ್ಟದ ಪ್ರತಿಫಲದ ಹೂಡಿಕೆಯ ಆಸೆಗೆ ಬಿದ್ದರೆ ಕೊಟ್ಟ ದುಡ್ಡಿನಲ್ಲಿ ಬಹುಪಾಲು ಹೂಡಿಕೆಗೇ ಹೋಗುತ್ತದೆ. ಹಾಗಾಗಿ ಅಲ್ಲಿ ವಿಮೆಗೆ ಅವಕಾಶ ಎಲ್ಲಿದೆ ನೀವೇ ಯೋಚಿಸಿ?

**2.) ನಾನು 46 ವರ್ಷದ ಹೇಮಂತ್. ಉಡುಪಿ ನಿವಾಸಿಯಾಗಿರುವ ನಾನು ಬೆಂಗಳೂರಿನ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದೇನೆ. ನನಗೆ ಕಂಪನಿ ವತಿಯಿಂದ ಗ್ರೂಪ್ ಹೆಲ್ತ್ ಇನ್ಶೂರನ್ಸ್ ಮಾಡಿಸಿದ್ದಾರೆ. ಮಾಸಿಕ ಸಂಬಳದಿಂದ ಪ್ರೀಮಿಯಂ ಕಟ್ಟಲಾಗುತ್ತಿದೆ. ನಾನು ಇದನ್ನು ವೈಯಕ್ತಿಕ ಹೆಲ್ತ್ ಪಾಲಿಸಿಯಾಗಿ ವರ್ಗಾಯಿಸಬಹುದಾ.?**

ಹೇಮಂತ್ ನೀವು ಬಹಳ ಒಳ್ಳೆಯ ಪ್ರಶ್ನೆ ಕೇಳಿದ್ದೀರಿ. ಬಹುತೇಕರಿಗೆ ಇನ್ಶೂರನ್ಸ್ ಪೋರ್ಟೆಬಿಲಿಟಿ ಬಗ್ಗೆ ಸರಿಯಾದ ಮಾಹಿತಿ ಇಲ್ಲ. ಖಂಡಿತವಾಗಿಯೂ ಗ್ರೂಪ್ ಹೆಲ್ತ್ ಪಾಲಿಸಿಯನ್ನು ವಯಕ್ತಿಕ ಪಾಲಿಸಿಯಾಗಿ ಪೋರ್ಟ್ ಮಾಡಿ ಪರಿವರ್ತಿಸಿಕೊಳ್ಳಬಹುದು. ವಿಮಾ ಕಂಪನಿಗಳನ್ನು ನಿಯಂತ್ರಿಸುವ ಇನ್ಶೂರನ್ಸ್ ರೆಗ್ಯೂಲೆಟರಿ ಡೆವಲಪ್‌ಮೆಂಟ್ ಅಥಾರಿಟಿ (ಐಆರ್‌ಡಿಎ) ಇಂತಹ ವ್ಯವಸ್ಥೆಯನ್ನು ಗ್ರಾಹಕರಿಗೆ ಒದಗಿಸಿದೆ. ಇಷ್ಟೆ ಅಲ್ಲ, ಹೀಗೆ ವರ್ಗಾವಣೆ ಮಾಡಿದ ಸಂದರ್ಭದಲ್ಲಿ ನಿಮ್ಮ ವಿಮೆಯಿಂದ ಸಿಗುವ ಯಾವುದೇ ಲಾಭಗಳಿಂದ ಕೂಡ ನೀವು ವಂಚಿತರಾಗುವುದಿಲ್ಲ. ಐಆರ್‌ಡಿಎ ಈ ನಿಯಮವನ್ನು ಸ್ಪಷ್ಟವಾಗಿ ತಿಳಿಸಿದೆ. ಯಾವುದೇ ಮಾದರಿಯ ವಿಮೆಯನ್ನು ಪೋರ್ಟ್ ಮಾಡಲು ಸಾಧ್ಯವಾಗುವುದು ವಾರ್ಷಿಕ ಪ್ರೀಮಿಯಂ ಪಾವತಿಯ ಅವಧಿಯಲ್ಲಿ ನೀವು ಇನ್ಶೂರನ್ಸ್ ರಿನಿವಲ್ ಮಾಡುವ 45 ದಿನ ಮೊದಲು ಈಗಾಗಲೇ ವಿಮೆ ನೀಡಿರುವ ಕಂಪನಿಗೆ ಇನ್ಶೂರನ್ಸ್ ಪೋರ್ಟ್‌ಮಾಡಲು ಸೂಚಿಸಬೇಕು. ಯಾವ ಕಂಪನಿಗೆ ಪೋರ್ಟ್ ಮಾಡಬೇಕು ಎನ್ನುವ ಬಗ್ಗೆ ವಿವರ ನೀಡಬೇಕು. ಆಗ ಈಗಾಗಲೇ ಇರುವ ಕಂಪನಿ ನಿಮ್ಮ ಕೋರಿಕೆಗೆ ಸ್ಪಂದಿಸುತ್ತದೆ. ಹೀಗೆ ವರ್ಗಾವಣೆ ಆಗುವ ಸಂದರ್ಭದಲ್ಲಿ ನಿಮ್ಮ ವಿಮೆ ನಿಗದಿತ ದಿನಗಳ ಒಳಗೆ ರಿನಿವಲ್ ಆಗುವುದನ್ನು ಖಾತ್ರಿಪಡಿಸಿಕೊಳ್ಳಬೇಕು. ಇಲ್ಲದಿದ್ದಲ್ಲಿ ತುರ್ತು ಅಗತ್ಯ ಎದುರಾದಾಗ ತೊಂದರೆಗೆ ಸಿಲುಕುವ ಸಾಧ್ಯತೆ ಇರುತ್ತದೆ.

**3.) ನಾನು ಮಹೇಶ್. ಚಾಮರಾಜನಗರ ನಿವಾಸಿ. 27 ವರ್ಷದ ವಿವಾಹಿತನಾಗಿದ್ದು 2.5 ವರ್ಷದ ಮಗಳಿದ್ದಾಳೆ. ನಮ್ಮ ಬಳಿ 6 ಎಕರೆ ಜಮೀನಿದೆ. ನಾನು ಎಫ್‌ಡಿಎ ನೌಕರನಾಗಿದ್ದು, ತಿಂಗಳಿಗೆ 23 ಸಾವಿರ ನಿವ್ವಳ ವೇತನ ಸಿಗುತ್ತದೆ. ಈ ಹಣದಲ್ಲಿ ಪ್ರತಿ ತಿಂಗಳು 1 ಸಾವಿರವನ್ನು ಮ್ಯೂಚುವಲ್ ಫಂಡ್‌ನಲ್ಲಿ ಹೂಡಿಕೆ ಮಾಡಲು ನಿರ್ಧರಿಸಿದ್ದೇನೆ. ಇದು ಸರಿಯಾದ ನಿರ್ಧಾರವೇ ತಿಳಿಸಿ.?**

ನೀವು ರಿಸ್ಕ್ ಕಡಿಮೆ ಇರುವ ಕಡೆ ಹೂಡಿಕೆ ಮಾಡಿ ಎನ್ನುವುದು ನನ್ನ ಸಲಹೆ. ಮ್ಯೂಚುವಲ್ ಫಂಡ್‌ನಲ್ಲಿ ಲಾರ್ಜ್, ಮಿಡ್ ಮತ್ತು ಸ್ಮಾಲ್ ಕ್ಯಾಪ್ ಎಂಬ ಮೂರು ವಿಧಗಳಿವೆ. ಲಾರ್ಜ್ ಕ್ಯಾಪ್ ಎಂದರೆ ದೊಡ್ಡ ಮಟ್ಟದಲ್ಲಿ ವ್ಯವಹಾರನಡೆಸುವ ಕಂಪನಿಗಳು, ಅದೇ ರೀತಿ ಮಿಡ್ ಕ್ಯಾಪ್ ಮತ್ತು ಸ್ಮಾಲ್ ಕ್ಯಾಪ್ ಎಂದರೆ ಮಧ್ಯಮ ಮತ್ತು ಸಣ್ಣ ಗಾತ್ರದ ಕಂಪನಿಗಳು. ಲಾರ್ಜ್ ಕ್ಯಾಪ್ ಕಂಪನಿಗಳ ಮ್ಯೂಚುವಲ್ ಫಂಡ್‌ಗಳ ಮೇಲಿನ ಹೂಡಿಕೆಯಲ್ಲಿ ರಿಸ್ಕ್ ಕಡಿಮೆ. ಭಾರಿಮೌಲ್ಯದ ಕಂಪನಿಗಳು ಮಾರುಕಟ್ಟೆಯ ಏರಿಳಿತಗಳಿಂದ ಹೆಚ್ಚು ಪ್ರಭಾವಕ್ಕೆ ಒಳಗಾಗುವುದಿಲ್ಲ. ಮಿಡ್ ಮತ್ತು ಸ್ಮಾಲ್ ಕ್ಯಾಪ್ ಫಂಡ್‌ಗಳಲ್ಲಿ ರಿಸ್ಕ್ ಜಾಸ್ತಿ. ಹಾಗಾಗಿ ನೀವು ಲಾರ್ಜ್ ಕ್ಯಾಪ್ ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆಗೆ ಚಿಂತಿಸಬಹುದು. ಹೂಡಿಕೆ ಮಾಡುವ ಮುನ್ನ ಮ್ಯೂಚುವಲ್ ಫಂಡ್‌ಗಳು ಮಾರುಕಟ್ಟೆ ಏರಿಳಿತಗಳಿಗೆ ಒಳಪಟ್ಟಿವೆ ಎಂಬ ಅಂಶವನ್ನು ಅರಿತೇ ಮುನ್ನಡೆಯಬೇಕು. ಯಾಕಂದ್ರೆ ಮ್ಯೂಚುವಲ್ ಫಂಡ್‌ಗಳಲ್ಲಿ ಒಂದಿಷ್ಟು ಪ್ರಮಾಣದ ರಿಸ್ಕ್ ಇದ್ದೇ ಇರುತ್ತದೆ. ಮ್ಯೂಚುವಲ್ ಫಂಡ್ ಜತೆ ನಿಮ್ಮ ಮಗಳ ಹೆಸರಿನಲ್ಲಿ ಸುಕನ್ಯ ಸಮೃದ್ಧಿ ಖಾತೆ ತೆರೆಯುವ ಬಗ್ಗೆ ಚಿಂತಿಸಿ. ಹತ್ತು ವರ್ಷದೊಳಗಿನ ಹೆಣ್ಣು ಮಕ್ಕಳ ಹೆಸರಿನಲ್ಲಿ ಯಾವುದೇ ಪೋಸ್ಟ್ ಆಫೀಸಿನಲ್ಲಿ ಈ ಖಾತೆ ಆರಂಭಿಸಬಹುದು. ಒಂದುವರ್ಷದಲ್ಲಿ ಕನಿಷ್ಟ 1 ಸಾವಿರದಿಂದ ಗರಿಷ್ಠ 1.5 ಲಕ್ಷ ರೂ. ವರೆಗೆ ಜಮಾ ಮಾಡಲು ಅವಕಾಶವಿದೆ. ಹೂಡಿಕೆ ಮಾಡಿದ ಮೊತ್ತಕ್ಕೆ ವಾರ್ಷಿಕವಾಗಿ ಬಡ್ಡಿ, ಚಕ್ರಬಡ್ಡಿ ಸಿಗುತ್ತದೆ. ಈ ಖಾತೆ 21 ವರ್ಷದವರೆಗೂ ಚಾಲ್ತಿಯಲ್ಲಿರುತ್ತದೆ. ಹೆಣ್ಣು ಮಗಳಿಗೆ 18 ವರ್ಷವಾದ ಬಳಿಕ, ಆಕೆ ತನ್ನ ಖಾತೆಯಲ್ಲಿನ ಅರ್ಧದಷ್ಟು ದುಡ್ಡನ್ನು ಶಿಕ್ಷಣ, ಮದುವೆ ಉದ್ದೇಶಕ್ಕೆ ಪಡೆಯಬಹುದು.

ಉಚಿತ ಆರ್ಥಿಕ ಸಲಹೆಗಾಗಿ ಮಿಸ್ ಕಾಲ್ ಕೊಡಿ
022 6181 6111

IndianMoney.com™
Be Wise, Get Rich